# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ದಿನಾಂಕ:20-02-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:20-02-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>**

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಪ | ಕಾರ್ಯದರ್ಶಿ |
| 3 | ಶ್ರೀ.ವಿ.ರವಿಚಂದ್ರ | ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 4 | ಶ್ರೀ.ವೆಂಕಟೇಶ್.ಹೆಚ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಕಾರ್ಯದರ್ಶಿ |
| 5 | ಶ್ರೀ.ಸಿ.ಟಿ.ಮಲ್ಲೇಶ್ | ಎ.ಇ.ಸಿ.ಎಸ್ ಲೇಔಟ್ |
| 6 | ಶ್ರೀ.ಕೆ.ನಾಗರಾಜ್ | ವೈಕುಂಠ ಲೇಔಟ್ |
| 7 | ಶ್ರೀ.ಅರವಿಂದ್ ಕೀರ್ತಿ | ಬ್ರೂಕ್‌ಫೀಲ್ಡ್ ಅಸೋಶಿಯೇಷನ್ |
| 8 | ಶ್ರೀ.ಹರೀಶ್ | ಮಾರುತಿ ಲೇಔಟ್ |
| 9 | ಶ್ರೀ.ರಾಜ ಶ್ರೀ | ವಾಸ ಲೇಔಟ್ |
| 10 | ಶ್ರೀ.ರಮೇಶ್ | ವಾಸ ಲೇಔಟ್ |
| 11 | ಶ್ರೀ.ಇಂದು | ದೊಡ್ಡನೆಕ್ಕುಂದಿ |

ಶ್ರೀ.ಡಾ॥ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

1. ಸಭೆಯಲ್ಲಿ ದಿನಾಂಕ:06-02-2021 ರಂದು ನಡೆದ ನಡುವಳಿಗಳನ್ನು ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ವಿವರಿಸಿದರು.

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯಕ್ಕೆ ಪುರಕವಾದ ಸಲಹೆ/ಸೂಚನೆಯಂತೆ ಸಾರ್ವಜನಿಕರಿಂದ ಮನವಿಗಳು ಈ ಕೆಳಕಂಡಂತಿರುತ್ತದೆ.
    - ವಾಸ ಲೇಔಟ್, ಎ.ಇ.ಸಿ.ಎಸ್ ಲೇಔಟ್, ಮತ್ತು ವೈಕುಂಟ ಲೇಔಟ್ ನಲ್ಲಿ ಯಾವುದೇ ಕಾಂಕ್ರೀಟ್ ಚರಂಡಿಗಳು ನಿರ್ಮಾಣವಾಗಿರುವುದಿಲ್ಲ.
    - ವಿಬ್‌ಗ್ಯಾರ್ ಶಾಲೆ, ನಾರಾಯಣ ಶಾಲೆ ತೂಬರಹಳ್ಳಿ ಇಲ್ಲಿ ಮಣ್ಣಿನ ರಸ್ತೆ ಇದ್ದು, ಈ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಕೋರಿರುತ್ತಾರೆ.
    - ವಿನಾಯಕ ಲೇಔಟ್, ಆಶ್ರಯ ಲೇಔಟ್, ಸ್ಪೈಸ್ ಗಾರ್ಡನ್, ನಿಸರ್ಗ ಲೇಔಟ್, ದೊಡ್ಡನೆಕ್ಕುಂದಿ ಗ್ರಾಮ ಚರಂಡಿ ಮತ್ತು ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುತ್ತಾರೆ.

3. ಸಭೆಯಲ್ಲಿ ಶ್ರೀಮತಿ.ರಾಜಶ್ರೀ ರವರು ಪೌರಕಾರ್ಮಿಕರಿಗೆ ವೇಳಪಟ್ಟಿ ನಿಗಧಿಪಡಿಸಲು ಮತ್ತು ಬಿಬಿಎಂಪಿ ಆರೋಗ್ಯ ಇಲಾಖೆಯಲ್ಲಿ ಕಸವನ್ನು ತುಂಬಿಸಿ ಶ್ರೀಘ್ರವಾಗಿ ಕಾರ್ಯನಿರ್ವಹಿಸಲು ಪುಶ್‌ಕಾರ್ಟ್‌ಗಳು ಅವಶ್ಯಕತೆಯಿರುವುದೆಂದು ಕೋರಿದರು. ಸದರಿ ವಿಷಯವಾಗಿ ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ದೂರವಾಣಿ ಮುಖಾಂತರ ಸೂಚಿಸಿದ್ದು, ಶ್ರೀ.ರಘುನಂದನ್, ರವರು ಹಿಂದಿನ ನಡುವಳಿಕೆಯಲ್ಲಿ ಈಗಾಗಲೇ ಮಾಹಿತಿಯನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಲಾಗಿರುವುದೆಂದು ಹಾಗೂ ಅನುಮತಿ ದೊರೆತಾಗ ಪುಶ್‌ಕಾರ್ಟ್‌ಗಳನ್ನು ಟೆಂಡರ್ ಮುಖಾಂತರ ಅಳವಡಿಸಲು ಕ್ರಮಕೈಗೊಳ್ಳಲು ತಿಳಿಸಿದರು.

4. ಶ್ರೀ.ಅರವಿಂದ್ ಕೀರ್ತಿ ರವರು ರಾಯನ್ ಶಾಲೆ, ಕುಂದಲಹಳ್ಳಿ ಇಲ್ಲಿ ರಸ್ತೆ ಅಗೆದಿದ್ದು, ರಸ್ತೆ ತುಂಬಾ ಹಾಳಾಗಿ ಸಾರ್ವಜನಿಕರಿ ಓಡಾಡಲು ಅನಾನುಕೂಲವಾಗಿದ್ದು, ಸಂಬಂಧಪಟ್ಟ ಇಲಾಖೆಯವರು ರಸ್ತೆ ಡಾಂಬರೀಕರಣ ಮಾಡಿಕೊಡಲು ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ಶ್ರೀ.ವಿ.ರವಿಚಂದ್ರ, ಸಹಾಯಕ ಅಭಿಯಂತರರು, ರವರು ಸದ್ಯಕ್ಕೆ ರಸ್ತೆ ಡಾಂಬರೀಕರಣಗೊಳಿಸಲು ಯಾವುದೇ ಅನುದಾನವಿರುವುದಿಲ್ಲ. ಆದರೆ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ಮತ್ತು ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

5. ಶ್ರೀ.ಅರವಿಂದ್ ಕೀರ್ತಿ ರವರು ರಾಯನ್ ಶಾಲೆ, ಕುಂದಲಹಳ್ಳಿ ಇಲ್ಲಿ ರಸ್ತೆ ಅಗೆದಿರುವ ದೂರಿನ ಕುರಿತು ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಇನ್ನು ಮುಂದೆ ಅನಧಿಕೃತವಾಗಿ ರಸ್ತೆ ಅಗೆಯುವುದು ಕಂಡು ಬಂದಲ್ಲಿ ಕಂಟ್ರೋಲ್ ರೂಂ, ಬಿಬಿಎಂಪಿ, ಮಹದೇವಪುರ ವಲಯ ರವರ ಕಛೇರಿಗೆ ದೂರನ್ನು ಸಲ್ಲಿಸಲು ತಿಳಿಸಿರುತ್ತಾರೆ.

6. ಶ್ರೀ.ಹರೀಶ್, ಮಾರುತಿ ಲೇಔಟ್‌ನ ಚರಂಡಿ ತುಂಬಿ ರಸ್ತೆ ಬದಿಯಲ್ಲಿ ಚರಂಡಿ ನೀರು ಹರಿಯುತ್ತಿರುವುದಾಗಿ ದೂರು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಸಂಬಂಧಪಟ್ಟ ಇಲಾಖೆ BWSSB ರವರಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

Scanned with CamScanner

7. ಶ್ರೀ.ರಮೇಶ್, ವಾಸ ಲೇಔಟ್‌ನಲ್ಲಿ ಚರಂಡಿ ಹೂಳು ತೆಗೆಯುವ ಬಗ್ಗೆ, ಮಾರ್ಷಲ್ ರವರಿಗೆ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಹಾಕುವರಿಗೆ ದಂಡ ವಿಧಿಸಲು ಸೂಚಿಸಲಾಯಿತು.

8. ಶ್ರೀಮತಿ.ಇಂದು, ರವರು ದೊಡ್ಡನೆಕ್ಕುಂದಿ ವಾರ್ಡ್ ನಂ.85ರ ವ್ಯಾಪ್ತಿಯ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸಭೆಯಲ್ಲಿ ಕೋರಿರುತ್ತಾರೆ. ಸದರಿ ವಿಚಾರವಾಗಿ ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಸಂಬಂಧಪಟ್ಟ ಇಲಾಖೆ (ಕೆರೆಗಳ ಅಭಿವೃದ್ಧಿ, ಬಿಬಿಎಂಪಿ) ರವರಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

9. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಕೆಳಗಿನಂತೆ ಕೆಲವೊಂದು ಸಮಸ್ಯೆಗಳನ್ನು ಬಗೆಹರಿಸಲು ಕೋರಿದರು.

- ಎ.ಇ.ಸಿ.ಎಸ್.ಬಡಾವಣೆಯ ಎ,ಬಿ,ಸಿ ಮತ್ತು ಡಿ ಬ್ಲಾಕ್‌ಗಳಲ್ಲಿ ಹೂಳು ತೆಗೆಯು ಕಾಮಗಾರಿಯು ಕೊನೆ ಹಂತದಲ್ಲಿದ್ದು, ಕಾಮಗಾರಿಯನ್ನು ತ್ವರಿತಗೊಳಿಸಲು ಪೂರ್ಣಗೊಳಿಸಲು ಕೋರಿದರು.
- ಸದರಿ ಬಡಾವಣೆಯಲ್ಲಿ ಕಲ್ವರ್ಟ್ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲು ಗುತ್ತಿಗೆದಾರರಿಗೆ ಸೂಚಿಸಲಾಯಿತು.
- ಸದರಿ ಬಡಾವಣೆಯಲ್ಲಿ ಡಾಂಬರೀಕರಣ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲು ಗುತ್ತಿಗೆದಾರರಿಗೆ ಸೂಚಿಸಲಾಯಿತು.
- ಎ.ಇ.ಸಿ.ಎಸ್.ಬಡಾವಣೆಯ ಎ ಬ್ಲಾಕ್ ಆಟದ ಮೈದಾನದ ಪಾದಚಾರಿ ಮಾರ್ಗದ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಸಲು ಕೋರಿದರು.

10. ಕ್ರಮ ಸಂಖ್ಯೆ (9) ರಲ್ಲಿ ತಿಳಿಸಿರುವ ಎಲ್ಲಾ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ಶ್ರೀ.ರಾಚಪ್ಪ, ಸ.ಅ ವಾರ್ಡ್ ನಂ.85 ರವರು ಸಭೆಯಲ್ಲಿ ತಿಳಿಸಿದರು.

11. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ರಸ್ತೆ ಮೂಲಭೂತ ಸೌಕರ್ಯ ವತಿಯಿಂದ ನಡೆಯುತ್ತಿರುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸಂಬಂಧ ಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು. ಸದರಿ ವಿಷಯವಾಗಿ ಶ್ರೀ.ವಿ.ರವಿಚಂದ್ರ, ಸಹಾಯಕ ಅಭಿಯಂತರರು, ರವರು ಎ.ಇ.ಸಿ.ಎಸ್.ಬಡಾವಣೆಯ 60 ಅಡಿ ರಸ್ತೆಯ ಕಾಮಗಾರಿಯು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

12. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಪುಟ್‌ಪಾತ್ ತೆರವು ಕಾರ್ಯಕ್ರಮವನ್ನು ಅತೀ ಶ್ರೀಘ್ರದಲ್ಲೇ ಹಮ್ಮಿಕೊಳ್ಳಲು ಕೋರಿದರು. ಸದರಿ ವಿಷಯಕ್ಕೆ ಸಬಂಧಿಸಿದಂತೆ ಶ್ರೀ.ರಾಚಪ್ಪ, ಸ.ಅ ವಾರ್ಡ್ ನಂ.85 ರವರು ಕೈಗೊಳ್ಳಲಾಗುವುದೆಂದು ತಿಳಿಸಿದರು.

Scanned with CamScanner

13.ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಎಇ.ಸಿ.ಎಸ್.ಬಡಾವಣೆಯ ವಿದ್ಯುತ್ ಕಂಬಗಳನ್ನು ರಸ್ತೆಯ ಬದಿಗೆ ಸ್ಥಳಾಂತರಿಸಲು ದಿನಾಂಕವನ್ನು ಕೋರಿದರು. ಸದರಿ ವಿಷಯಕ್ಕೆ ಶ್ರೀ.ವಿ.ರವಿಚಂದ್ರ, ಸಹಾಯಕ ಅಭಿಯಂತರರು, ರವರು ಸದರಿ ವಿಷಯದ ಕಡತವು ಮೇಲಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಿದ್ದು, ಅತೀ ಶೀಘ್ರದಲ್ಲೇ ಅನುಮೋದನೆ ಪಡೆದು 60 ಅಡಿ ರಸ್ತೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದರು.

14.ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಮಕ್ಕಳ ಆಟ ಪೀಠೋಪಕರಣಗಳನ್ನು ಉದ್ಯಾನವನದಲ್ಲಿ ಅಳವಡಿಸದೇ ಭಾಗಶಃ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಶ್ರೀ.ಡಾ||ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಸೂಚಿಸಲಾಯಿತು.

15.ಶ್ರೀ ಸುರೇಶ್ ಅದ್ಯಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಿಸಲು ಸೂಚಿಸಿದರು.

ಸಭೆಯಲ್ಲಿ ಇತರ ಇಲಾಖೆಯವರಾದ ಬೆಸ್ಕಾಂ, ಪೋಲಿಸ್ ಮತ್ತು ತೋಟಗಾರಿಕೆ ಇಲಾಖೆ ರವರಿಗೆ ಮುಂದಿನ ಸಭೆಗೆ ಹಾಜರಾಗಲು ಶ್ರೀ ಸುರೇಶ್ ಅದ್ಯಕ್ಷಕರು ಸೂಚಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ
ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85

Scanned with CamScanner